# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ.

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡಗಳು**

**ನೃಪತುಂಗ ರಸ್ತೆ, ಬೆಂಗಳೂರು – 560 001**

ಸಂಖ್ಯೆ: RMSA/Model Schools/1/2010-11 ದಿನಾಂಕ: 16.04.2010.

ಗೆ,

ಉಪನಿರ್ದೇಶಕರು (ಆಡಳಿತ)

______________

______________ಜಿಲ್ಲೆ.

**ವಿಷಯ:**– ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ಮಾಡೆಲ್ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.

**********

ದಿನಾಂಕ 12.04.2010 ಮತ್ತು 13.04.2010 ರಂದು ಮಾಡೆಲ್ ಶಾಲೆ ಕುರಿತಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ನಡೆಸಿ ಪರಿಶೀಲಿಸಲಾಯಿತು. ಈ ಸಭೆಯಲ್ಲಿ ಪಡೆದ ವಿವರಗಳ ಆಧಾರದ ಮೇಲೆ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

1. ಮಾಡೆಲ್ ಶಾಲೆ ಪ್ರಾರಂಭಿಸಲು ಸೂಕ್ತವಾದ ಸ್ಥಳವನ್ನು ಆಯ್ಕೆಮಾಡಿರುವದಿಲ್ಲ.
2. ಈಗ ಆಯ್ಕೆ ಮಾಡಿರುವ ಸ್ಥಳಗಳಿಗೆ ತಾಲೂಕಿನ ಎಲ್ಲಾ ಮಕ್ಕಳು ಪ್ರತಿದಿನ ಬಂದು ಹೋಗಲು ಸಾರಿಗೆ ಸೌಲಭ್ಯ ಇರುವುದಿಲ್ಲ.
3. ಬಹುತೇಕ ಸ್ಥಳಗಳು ತಾಲೂಕು ಕೇಂದ್ರದಿಂದ 5 ಕೀ.ಮೀ ಗಿಂತ ದೂರ ಇದ್ದು, ಕೆಲವು ಸ್ಥಳಗಳು 20 ಕಿ.ಮೀ ದೂರ ಇರುತ್ತವೆ.
4. ಕೆಲವು ಸ್ಥಳಗಳು ಅರಣ್ಯ ಪ್ರದೇಶವಾಗಿದ್ದು ಇಲ್ಲಿ ಶಾಲೆ ಪ್ರಾರಂಬಿಸಲು ಸೂಕ್ತವಾಗಿರುವುದಿಲ್ಲ
5. ಈ ಸ್ಥಳಗಳಲ್ಲಿ ಪೂರಕ ಸೌಲಭ್ಯಗಳಾದ ಆಸ್ಪತ್ರೆ, ನೀರು, ಮಾರ್ಕೆಟ್ ಮುಂತಾದುವುಗಳು ಇರುವುದಿಲ್ಲ

ಈ ಮಾಡೆಲ್ ಶಾಲೆಗಳು **Day School** ಆಗಿದ್ದು ತಾಲೂಕಿನ ಎಲ್ಲಾ ಕಡೆಯಿಂದ ವಿದ್ಯಾರ್ಥಿಗಳು ದಾಖಲಾಗುತ್ತಾರೆ. ಇವರು ಪ್ರತಿ ದಿನ ಶಾಲೆಗೆ ಬಂದು ಹೋಗಬೇಕಾಗಿರುವುದರಿಂದ ಇದಕ್ಕೆ ಅನುಕೂಲವಾಗುವಂತಹ ಸೂಕ್ತವಾದ ಸ್ಥಳವನ್ನು ಗುರ್ತಿಸಬೇಕಾಗಿರುತ್ತದೆ. ಈ ಶಾಲೆಗಳಿಗಾಗಿ ತಾಲೂಕಿನ ಕೇಂದ್ರ ಸ್ಥಾನದಲ್ಲಿ ಅಥವಾ ತಾಲೂಕು ಕೇಂದ್ರ ಸ್ಥಾನದಿಂದ 3 ಕಿ.ಮೀ ವ್ಯಾಪ್ತಿಯೊಳಗೆ, ಸಾರಿಗೆ ವ್ಯವಸ್ಥೆ ಇರುವಂತಹ ಸ್ಥಳವನ್ನು ಗುರ್ತಿಸುವುದು ಸೂಕ್ತವಾಗಿರುತ್ತದೆ.

2010-11 ನೇ ಸಾಲಿನಲ್ಲಿ ಈ ಶಾಲೆಗಳನ್ನು 6 ನೇ ತರಗತಿಯೊಂದಿಗೆ ತಾತ್ಕಾಲಿಕ ವ್ಯವಸ್ಥೆಯಲ್ಲಿ ಪ್ರಾರಂಭಿಸಬೇಕಾಗಿದ್ದು ಸೂಕ್ತ ಸ್ಥಳದ ಅಭಾವದಿಂದಾಗಿ ನೀವು ಪ್ರಸ್ತಾವನೆ ಸಲ್ಲಿಸಿರುವ 74 ಶಾಲೆಗಳನ್ನು ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ. ತಾಲೂಕು ಕೇಂದ್ರ ಸ್ಥಾನದಲ್ಲಿ ಕನಿಷ್ಠ 4 ಕೊಠಡಿಗಳು, ಶೌಚಾಲಯ, ನೀರು, ಆಟದ ಮೈದಾನ ಲಭ್ಯವಿರುವ ಸರ್ಕಾರಿ ಶಾಲಾಕಟ್ಟಡ, ಸರ್ಕಾರಿಕಟ್ಟಡ ಅಥವಾ ಬಾಡಿಗೆ ಕಟ್ಟಡವನ್ನು ಗುರ್ತಿಸುವುದು ಅವಶ್ಯವಾಗಿರುತ್ತದೆ. ಈ ಬಗ್ಗೆ ಈ ತಿಂಗಳ ದಿನಾಂಕ 12 ಮತ್ತು 13 ರಂದು ನಡೆದ ನೋಡಲ್ ಅಧಿಕಾರಿಗಳು ಹಾಗು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆಯಲ್ಲಿ ತಿಳಿಸಲಾಗಿದೆ.

ಉಪನಿರ್ದೇಶಕರು ಕೂಡಲೇ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಸಭೆ ಕರೆದು, ಈ ಬಗ್ಗೆ ಚರ್ಚಿಸಿ ತಾತ್ಕಾಲಿಕ ವ್ಯವಸ್ಥೆಗಾಗಿ ಮೇಲೆ ತಿಳಿಸಿರುವಂತೆ ಕಟ್ಟಡ, ನಿಯೋಜನೆ ಮಾಡಲು ತರಬೇತಿ ಹೊಂದಿದ ಪದವೀಧರ ಶಿಕ್ಷಕರನ್ನು ಗುರ್ತಿಸಿ ಕಟ್ಟಡದ ಛಾಯಾಚಿತ್ರದೊಡನೆ ಈ ಕಟ್ಟಡವನ್ನು ಆಕರ್ಷಣೀಯವಾಗಿ ಮಾಡಲು ಬೇಕಾದ ಅವಶ್ಯಕತೆಗಳ ಪಟ್ಟಿ ಮಾಡಿ ದಿನಾಂಕ: 20.04.2010 ರ ಒಳಗೆ ಈ ಕಛೇರಿಗೆ ಕಳುಹಿಸುವುದು. ಹೀಗೆ ಬಂದ ಮಾಹಿತಿಯ ಆಧಾರದ ಮೇಲೆ ರಾಜ್ಯ ಮಟ್ಟದಿಂದ ಒಂದು ತಂಡ ಭೇಟಿ ಮಾಡಿ, ಪರಿಶೀಲಿಸಿ ಅಂತಿಮ ನಿರ್ಧಾರವನ್ನು ತೆಗೆದು ಕೊಳ್ಳಲಾಗುವುದು.

2010–11 ನೇ ಸಾಲಿಗೆ ತಾತ್ಕಾಲಿಕ ವ್ಯವಸ್ಥೆಯಲ್ಲಿ ಪ್ರಾರಂಭ ಮಾಡಲು ಮೇಲೆ ತಿಳಿಸಿರುವಂತೆ ಅನುಕೂಲಗಳು ಇಲ್ಲದಿದ್ದಲ್ಲಿ 2011–12 ನೇ ಸಾಲಿನಿಂದ ಶಾಶ್ವತ ಕಟ್ಟಡದೊಂದಿಗೆ ಪ್ರಾರಂಭಿಸಲು ಅನುಕೂಲವಾಗುವಂತೆ, ತಾಲೂಕಿನ ಕೇಂದ್ರ ಸ್ಥಾನದಿಂದ 5 ಕಿ.ಮೀ ವ್ಯಾಪ್ತಿಯೊಳಗೆ ಸಾರಿಗೆ ಸಂಪರ್ಕ ಇರುವ ಕನಿಷ್ಟ 2 ಎಕರೆ ಗರಿಷ್ಟ 5 ಎಕರೆ ಜಾಗವನ್ನು ಗುರ್ತಿಸಿ ಸಂಬಂದಿಸಿದ ಇಲಾಖೆಗಳೊಂದಿಗೆ ಚರ್ಚಿಸಿ ಮೇ 2010 ರ ಒಳಗೆ ಇಲಾಖೆಗೆ ಹಸ್ತಾಂತರ ಮಾಡಲು ಕ್ರಮವಹಿಸಲು ತಿಳಿಸಿದೆ. ಈ ಬಗ್ಗೆ ತೆಗೆದುಕೊಂಡಿರುವ ಕ್ರಮ ಹಾಗು ನಿವೇಶನ ಮಾಹಿತಿಗಳನ್ನು ದಿನಾಂಕ 25–04–2010 ರ ಒಳಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

ಈ ಮಾಹಿತಿಯನ್ನು ನೀಡಲು ವಿಳಂಬ ಮಾಡಿದಲ್ಲಿ ನಿಮ್ಮನ್ನೇ ಹೊಣೆಗಾರರನ್ನಗಿ ಮಾಡಲಾಗುವುದು.

ರಾಜ್ಯ ಯೋಜನಾ ನಿರ್ದೇಶಕರ ಆದೇಶಾನುಸಾರ

ತಮ್ಮ ನಂಬುಗೆಯ

ಸಹನಿರ್ದೇಶಕರು (ಆಡಳಿತ)